# ಸಂಬಂಧದ ತಂತು ತೆಳುವಾಗುತ್ತಿದೆಯೇ?

ಲಾಗಾಯ್ತಿನಿಂದ ನಮ್ಮ ಸಮಾಜವು ಅಂತರ್ಗತವಾಗಿಯೇ ಕಾಪಿಟ್ಟುಕೊಂಡು ಬಂದಿದ್ದ ಮಾನವೀಯ ಸಂಬಂಧಗಳ ಗಟ್ಟಿನೆಲೆ ಈಗೀಗ ಅಳ್ಳಕಗೊಳ್ಳುತ್ತಿರುವುದು ದಿಗಿಲು ಹುಟ್ಟಿಸುವ ಬೆಳವಣಿಗೆ. ಇತ್ತೀಚಿನ ದಿನಗಳಲ್ಲಿ ತಂತ್ರಜ್ಞಾನದಿಂದ ಉಂಟಾದ – ಅದರಲ್ಲೂ ಬದುಕಿನ ಸರ್ವಸ್ವವೇ ಎನಿಸಿಬಿಟ್ಟಿರುವ ಅಂಗೈಯೊಳಗಿನ ಮೊಬೈಲ್‌ನಿಂದಾದ – ಸಾಮಾಜಿಕ ಪಲ್ಲಟಗಳು ಮನುಷ್ಯ ಸಂಬಂಧಗಳ ನಡುವಿನ ಕೊಂಡಿಯಾದ ಪ್ರೀತಿ–ಮಮತೆಗಳ ಗೆರೆಯನ್ನೇ ಅಳಿಸಿಹಾಕುತ್ತಿರುವಂತೆ ಭಾಸವಾಗುತ್ತಿದೆ. ಹೈಸ್ಕೂಲ್ ಓದುವ ಹುಡುಗಿ ತನ್ನ ತಂದೆಯನ್ನೇ ಕೊಲೆ ಮಾಡುವುದು; ಇನ್ನೊಂದೆಡೆ ಮಗಳ ಮೇಲೆ ತಂದೆಯೇ ಅತ್ಯಾಚಾರ ನಡೆಸುವುದು – ಇಂತಹ ಘಟನೆಗಳು ಸಂಬಂಧಗಳ ಪ್ರೀತಿಯ ಬಂಧನದಿಂದ ಮೈಕೊಡವಿಕೊಂಡ 'ಮನುಷ್ಯತ್ವ' ಹೇಗೆ ವಿಕಾರರೂಪ ತಾಳುತ್ತಿದೆ ಎನ್ನುವುದಕ್ಕೆ ಸಾಕ್ಷ್ಯ ನುಡಿಯುತ್ತಿವೆ.

ಕೌಟುಂಬಿಕ ಸಂಬಂಧಗಳ ನಿರ್ವಹಣೆಯ ವಿಚಾರದಲ್ಲಿ ಜಗತ್ತಿಗೇ ಆದರ್ಶಪ್ರಾಯವಾಗಿ ಕಂಡ ದೇಶ ನಮ್ಮದು. ತಂದೆ–ತಾಯಿಯೇ ದೇವರು ಎಂದು ಮಕ್ಕಳಿಗೆ ಹೇಳಿಕೊಟ್ಟ ಸಮಾಜ ನಮ್ಮದು. ಅಂತಹ ಸಮಾಜದಲ್ಲಿ ಪ್ರೀತಿ–ಕಾಳಜಿಯಿಂದ ಕಾಣಬೇಕಾಗಿದ್ದ ತಂದೆಯನ್ನೇ ಕೊಲೆ ಮಾಡುವಂತಹ ಮನಸ್ಸು ಹರೆಯದ ಹುಡುಗಿಗೆ ಬಂದಿದ್ದಾದರೂ ಹೇಗೆ? ಹಾಗೆಯೇ ಮಗಳನ್ನು ಅಮ್ಮನ ಸ್ವರೂಪದಲ್ಲಿ ಕಾಣುತ್ತಾ ಬಂದವರು ನಾವು. ಅವಳನ್ನು 'ಎಮ್ಮ ಮನೆಯಂಗಳದಿ ಬೆಳೆದ ಹೂವು' ಎಂದು ಆದರಿಸಿ, ಎತ್ತಿ ಮಮತೆಯಿಂದ ಮುದ್ದಾಡಿದವರೂ ಹೌದು. ಅಂತಹ ಮಗಳ ಮೇಲೆ ತಂದೆಯೇ ಅತ್ಯಾಚಾರದಂತಹ ಭೀಭತ್ಸ ಕೃತ್ಯ ನಡೆಸುವುದೆಂದರೆ ಏನು?

ಸಂಬಂಧಗಳ ನಿರ್ವಹಣೆಯ ವಿಚಾರದಲ್ಲಿ ನಾವು ಎಡವುತ್ತಿದ್ದೇವೆ ಎನ್ನುವುದಂತೂ ಸುಸ್ಪಷ್ಟ. ಎಳೆ ಹರೆಯದಲ್ಲೇ ಹೆಚ್ಚಾಗಿ ಈ ಸಂಬಂಧಗಳು ಹಳಸುತ್ತಿರುವುದು ಕಳವಳದ ಸಂಗತಿ. ಹರೆಯದ ಆಸುಪಾಸಿನ ಕಾಲಘಟ್ಟ ತುಂಬಾ ನಾಜೂಕಿನಿಂದ ನಿಭಾಯಿಸಬೇಕಾದ ಸಂದರ್ಭ. ಮಕ್ಕಳಲ್ಲಿ ಶಾರೀರಿಕವಾಗಿ, ಮಾನಸಿಕವಾಗಿ ಹಾಗೂ ಭಾವನಾತ್ಮಕವಾಗಿ ಬದಲಾವಣೆಯಾಗುವ ಕಾಲವದು. ಅಂದರೆ ಚಿಕ್ಕವರು ದೊಡ್ಡವರಾಗುವ ಸಮಯ. ಮನೆಯಲ್ಲಿ ಹೇಳಿಕೊಟ್ಟ ನೀತಿ–ನಿಯಮ, ಮೌಲ್ಯಗಳ ಪಾಠಕ್ಕಿಂತ ಪ್ರೇಮ–ಕಾಮಕ್ಕೇ ಹದಿಹರೆಯದವರು ಮನಸೋಲುವ ಪ್ರವೃತ್ತಿ ಹೆಚ್ಚು. ಈ ಸಮಯದಲ್ಲಿ ಅವರಲ್ಲಿ ದುಡುಕು ಮನೋಭಾವ ಇರುವುದು ಸಹಜ. ಸಾಮಾಜಿಕ ಮೌಲ್ಯಗಳ ಪರಿಧಿಯಿಂದ ಹೊರಬಂದು ಮಕ್ಕಳು ಅಡ್ಡದಾರಿ ತುಳಿಯುವುದನ್ನು ತಪ್ಪಿಸಲು, ಪೋಷಕರು ತಮ್ಮ ಮನಸ್ಸಿಗೆ ತೋಚಿದಂತಹ ಕಟ್ಟುಪಾಡುಗಳಲ್ಲಿ ಮಕ್ಕಳನ್ನು ಕೂಡಿ ಹಾಕುವುದು ಸರಿಯಲ್ಲ. ಸಹಜ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟಾಗುವಂತೆ ಮಕ್ಕಳ ಹಿಂದೆ ಬೀಳುವುದು, ಅವರ ಬೇಕು–ಬೇಡಗಳಿಗೆ ಸರಿಯಾಗಿ ಸ್ಪಂದಿಸದಿರುವುದು ಯುವ ಮನಸ್ಸುಗಳನ್ನು ಕೆರಳಿಸುತ್ತದೆ. ಶಿಸ್ತು, ನೀತಿ–ನಿಯಮಗಳ ಕಟ್ಟುಪಾಡುಗಳಲ್ಲಿ ಅವರನ್ನು ಬಂಧಿಸಿಡುವುದು ಈಗಿನ ದಿನಗಳಲ್ಲಿ ಆಗಲಾರದ ಕೆಲಸ. ಇಂತಹ ಕಟ್ಟುಪಾಡುಗಳು ಮಕ್ಕಳಿಂದ ಕೌಟುಂಬಿಕ ಸಂಬಂಧಗಳನ್ನು ಮತ್ತಷ್ಟು ದೂರಕ್ಕೆ ಸರಿಸುತ್ತವೆ ಎನ್ನುತ್ತಾರೆ ಮನೋವಿಜ್ಞಾನಿಗಳು. ಪ್ರೀತಿಯ ನಶೆಯೊಳಗೆ ಮುಳುಗಿದವರಲ್ಲಿ ವಿವೇಚನೆ, ತಾರ್ಕಿಕ ಚಿಂತನೆಗಳನ್ನು ನಿರ್ವಹಿಸುವ ಮುಂಮೆದುಳು (ನಿಯೋಕಾರ್ಟೆಕ್ಸ್) ಕೆಲಸ ಮಾಡುವುದಿಲ್ಲ. ಹೀಗಾಗಿ ಅಪರಾಧ ಎಸಗಲೂ ಅವರು ಹಿಂಜರಿಯುವುದಿಲ್ಲ. ಇಂತಹ ಮನೋವಿಜ್ಞಾನದ ವಿಶ್ಲೇಷಣೆಯ ಬೆಳಕಿನಲ್ಲೇ ಯುವ ಪೀಳಿಗೆಯನ್ನು ತಂದೆ–ತಾಯಿಗಳು ವಿವೇಕದಿಂದ ಬೆಳೆಸಲು ಮುಂದಾಗಬೇಕು.

ಕಳೆದ ಶತಮಾನದ ಕೊನೆಯ ಕಾಲಘಟ್ಟದಲ್ಲಿ ದಾಂಗುಡಿಯಿಟ್ಟ ಜಾಗತಿಕರಣದ ಪ್ರಭಾವದಿಂದ ಸಮಾಜದಲ್ಲಿ ಏನೆಲ್ಲ ಬದಲಾವಣೆಗಳು ಆಗಿಹೋಗಿವೆ. ವಿದ್ಯಾಭ್ಯಾಸ ಹಾಗೂ ಉದ್ಯೋಗದ ಅವಕಾಶಗಳು ಮಹಿಳೆಯರಿಗೂ ಸಮಾನವಾಗಿ ಸಿಗುತ್ತಿವೆ. ಅವರು ಎಲ್ಲರೊಡನೆ ಮುಕ್ತವಾಗಿ ಬೆರೆಯಲು ಅವಕಾಶಗಳು ದೊರೆಯುತ್ತಿವೆ. ಮಹಿಳಾ ಸಮಾನತೆಯ ಆಶಯ ತಕ್ಕಮಟ್ಟಿಗೆ ಸಾಕಾರಗೊಂಡಿದೆ ಕೂಡ. ಓಬೀರಾಯನ ಕಾಲದಂತೆ ಈಗಲೂ ಜಾತಿ–ಧರ್ಮದ ಸಂಕೋಲೆಯೊಳಗೆ ಅವರನ್ನು ಕಟ್ಟಿಹಾಕದೆ ಹೊಸ ಸಮಾಜದ ಅಗತ್ಯಗಳಿಗೆ ಒಗ್ಗಿಕೊಳ್ಳುವ ಮನೋಭಾವವನ್ನು ತಂದೆ–ತಾಯಿಗಳು ಪ್ರದರ್ಶಿಸಬೇಕು. ಕಿರಿಯರೊಂದಿಗೆ ಮುಕ್ತವಾಗಿ ಬೆರೆತು, ಭಾವನೆಗಳನ್ನು ಗೌರವಿಸುವ ಜೊತೆಗೆ ಸೂಕ್ತ ಮಾರ್ಗದರ್ಶನ ನೀಡುವಲ್ಲಿ ಕುಟುಂಬದ ಎಲ್ಲರ ಹಿತ ಅಡಗಿದೆ ಎಂಬುದನ್ನು ಅರಿಯಬೇಕು.

ಮಕ್ಕಳಿಗೆ ಮಾತ್ರವಲ್ಲ, ಹಿರಿಯರಿಗೂ ಕಲಿಕೆಯ ಅಗತ್ಯವಿರುವ ಕಾಲಘಟ್ಟವಿದು. ಮಗಳನ್ನೇ ತನ್ನ ಲೈಂಗಿಕ ತೃಷೆಗೆ ಬಳಸಿಕೊಳ್ಳುವ ತಂದೆಯ ರಾಕ್ಷಸೀ ಪ್ರವೃತ್ತಿಗೆ ಏನು ಮಾಡುವುದು? ಸಂಬಂಧವನ್ನು ಇಷ್ಟೊಂದು ಹೀನಮಟ್ಟಕ್ಕೆ ತಂದು ನಿಲ್ಲಿಸಿದ ಈ ಕೃತ್ಯಕ್ಕೆ ಯಾವ ಮದ್ದನ್ನು ಅರಿಯಬೇಕು? ಸಂಬಂಧಗಳ ಪ್ರೀತಿಯ ಹೊಸದೊಂದು ಗಾಳಿ ಮತ್ತೆ ಹಿತವಾಗಿ ಬೀಸುವಂಥ ಸಂದರ್ಭವನ್ನು ರೂಪಿಸುವ ಸವಾಲು ನಮ್ಮೆಲ್ಲರ ಮುಂದಿದೆ. ಈ ಅರಿವಿನ ಬೀಜ ಬಿತ್ತಲು ಶಿಕ್ಷಣವೇ ಸರಿಯಾದ ಮಾರ್ಗ. ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಮೌಲ್ಯವರ್ಧಿತಗೊಳಿಸಿದರೆ ಕನಿಷ್ಠ ಮುಂದಿನ ತಲೆಮಾರಾದರೂ 'ಸಂಬಂಜ ಅನ್ನೋದು ದೊಡ್ಡದು ಕನಾ' ಎನ್ನುವ ದೇವನೂರ ಮಹಾದೇವರ ಮಾತು ನಿಜವಾದ ಅರ್ಥದಲ್ಲಿ ಸಾಕಾರಗೊಂಡೀತು.

■ ಪ್ರವೀಣ ಕುಲಕರ್ಣಿ

ಮಗಳು ತನ್ನ ತಂದೆಯನ್ನೇ ಕೊಲೆ ಮಾಡುವುದು; ಇನ್ನೊಂದೆಡೆ ಮಗಳ ಮೇಲೆ ತಂದೆಯೇ ಅತ್ಯಾಚಾರ ನಡೆಸುವುದು – ಇಂತಹ ಘಟನೆಗಳು ಸಂಬಂಧಗಳ ಪ್ರೀತಿಯ ಬಂಧನದಿಂದ ಮೈಕೊಡವಿಕೊಂಡ 'ಮನುಷ್ಯತ್ವ' ಹೇಗೆ ವಿಕಾರರೂಪ ತಾಳುತ್ತಿದೆ ಎನ್ನುವುದಕ್ಕೆ ಸಾಕ್ಷ್ಯ ನುಡಿಯುತ್ತಿವೆ.



ಈಶ್ವರ